**ಕಪ್ಪು ಗ್ರಾನೈಟ್ ಕಲ್ಲುಗಳು ದೊರೆಯುವ ಪ್ರದೇಶಗಳ ಸಂಖ್ಯೆ**

2000 - ಶ್ರೀ ಹೆಚ್. ವಿಶ್ವನಾಥ್ (ಕೆ.ಆರ್. ನಗರ) : ಮಾನ್ಯ ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*1. ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿರುವ ಕರಿಕಲ್ಲು ಪ್ರಾಪ್ತವಿರುವ ಜಮೀನುಗಳೆಷ್ಟು?*

ಶ್ರೀ ಎಂ.ಎಲ್. ಉಸ್ತಾದ್ (ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು);

1) ಮೈಸೂರಿನ ನಿಶ್ಚಿತ ಭಾಗಗಳಲ್ಲಿ ಬೆಂಗಳೂರು, ಬಳ್ಳಾರಿ, ಚಿತ್ರದುರ್ಗ, ದಕ್ಷಿಣ ಕನ್ನಡ, ಕಾರವಾರ, ತುಮಕೂರು, ಮಂಡ್ಯ ಮತ್ತು ಕೋಲಾರ ಜಿಲ್ಲೆಗಳಲ್ಲಿ ಸುಮಾರು 250 ಚದರ ಕಿ.ಮೀ.ಪ್ರದೇಶದಲ್ಲಿ ಕಪ್ಪು ಗ್ರಾನೈಟ್ ನಿಕ್ಷೇಪ ಅಡಕವಾಗಿದೆ.

**ಗ್ರಾನೈಟ್ ತೆಗೆಯಲು ಪರವಾನಗಿ ಪಡೆದವರ ಸಂಖ್ಯೆ**

2007 - ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) ಮತ್ತು ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್), ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) ಹಾಗೂ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) - ಮಾನ್ಯ ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ರಾಜ್ಯದಲ್ಲಿ ಎಷ್ಟು ಜನರಿಗೆ ಗ್ರಾನೈಟ್ ಜಮೀನಿನ ಗುತ್ತಿಗೆಯನ್ನು ನೀಡಲಾಗಿದೆ. (ಗುತ್ತಿಗೆ ಪಡೆದವರ ಹೆಸರು, ಸಂಸ್ಥೆಯ ಹೆಸರು ಇವುಗಳ ವಿವರಗಳನ್ನು ಒದಗಿಸುವುದು)*

*ಆ) ಸರ್ಕಾರದ ಹೊಸನೀತಿಯ ಗ್ರಾನೈಟ್ ತೆಗೆಯಲು ಅನುಮತಿ ನೀಡಿದ ಗುತ್ತಿಗೆದಾರರ ಸಂಖ್ಯೆ ಎಷ್ಟು?*

*ಇ) ಗ್ರಾನೈಟ್ ತೆಗೆಯಲು ಬಂದಿದ್ದ ಅರ್ಜಿಗಳ ಸಂಖ್ಯೆ ಎಷ್ಟು ಹಾಗೂ ಅವುಗಳಲ್ಲಿ ಎಷ್ಟು ಅರ್ಜಿಗಳನ್ನು ತಿರಸ್ಕರಿಸಲಾಗಿದೆ?*

*ಈ) ಈ ಗುತ್ತಿಗೆಗಳನ್ನು ನೀಡುವಾಗ ಹಾಗೂ ಅರ್ಜಿಗಳನ್ನು ತಿರಸ್ಕರಿಸುವಾಗ ಸರ್ಕಾರವು ಅನುಸರಿಸಿದ ನೀತಿ ನಿಯಮಗಳೇನು?*

ಶ್ರೀ ಎಂ.ಎಲ್. ಉಸ್ತಾದ್(ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು);

ಅ) ವಿವರಗಳನ್ನು ಅನುಬಂಧಗಳಲ್ಲಿ ನೀಡಿದೆ.

ಆ) ವಿವರಗಳನ್ನು ಅನುಬಂಧಗಳಲ್ಲಿ ನೀಡಿದೆ.

ಇ) ನಿಯಮ-3ರ ಪ್ರಕಾರ 628 ಅರ್ಜಿಗಳನ್ನು ಸ್ವೀಕರಿಸಲಾಗಿದೆ. ನಿಯಮ-3(ಎ) ಪ್ರಕಾರ 2473 ಅರ್ಜಿಗಳನ್ನು ಸ್ವೀಕರಿಸಲಾಗಿದೆ. ಯಾವುದನ್ನೂ ತಿರಸ್ಕರಿಸಲಾಗಿಲ್ಲ.

ಈ) ಕರ್ನಾಟಕ ಮೈನರ್ ಮಿನರಲ್ ಕನ್ಸೆಷನ್ ನಿಯಮ 69ರ ಪ್ರಕಾರ ಇರುತ್ತದೆ.